ನಮ್ಮ ನಾಯಕರ ಪತ್ನಿ ಮತ್ತು ದೇಶದ ಅಮ್ಮ, ಎಲೆನಾ ಚೌಸೆಸ್ಕೋ ಸ್ವಲ್ಪ ಸಿಟ್ಟಿನಿಂದಲೇ ಹೇಳಿದಳು—'ಯಾರೋ ಹೇಳಿದರಂತೆ, ನಿನ್ನಂಥವರು ಐನೂರು ವರ್ಷಕ್ಕೊಬ್ಬರು ಮಾತ್ರ ಹುಟ್ಟುತ್ತಾರೆ. ಅವರಿಗೇನು ಗೊತ್ತು? ಇಡೀ ಮಾನವ ಜನಾಂಗದ ಇತಿಹಾಸದಲ್ಲಿ ನಿನ್ನಂಥವನ್ನು ಹುಟ್ಟುವುದು ಒಮ್ಮೆ ಮಾತ್ರ.'

ನೋಡಿ. ಒಂದು ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಹೊಸ ಬುಖಾರೆಸ್ಟನ್ನು ಹೇಗೆ ಕಟ್ಟುವುದು? ಹಾಳಾದ್ದು, ಈ ಹಳೆಯದು ಕಣ್ಮರೆಯಾಗಲೊಲ್ಲದಲ್ಲ? ಅದಕ್ಕೇ ಹೇಳುವುದು, ದೇವರು ದೊಡ್ಡವನು ಎಂದು. ನಮ್ಮ ನಾಯಕರ ಮಾತನ್ನು ಅವನು ಕೇಳಿಸಿಕೊಂಡ. ನಮ್ಮ ನಾಯಕರು ಉತ್ತರ ಕೊರಿಯಾಗೆ ಭೇಟಿ ನೀಡಿ ಆರು ವರ್ಷವಾದ ಮೇಲೆ ಒಂದು ದೊಡ್ಡ ಭೂಕಂಪ ಬುಖಾರೆಸ್ಟನ್ನು ಅಪ್ಪಳಿಸಿತು. ಹಲವು ನೂರು ಕಟ್ಟಡಗಳು ನೆಲಸಮಗೊಂಡವು. ಪೆಟ್ಟಿಗೆಗಳ ಸಾಲನ್ನು ಉರುಳಿಸಿದಂತೆ, ಮನೆಗಳ ಗೋಡೆಗಳು ಉರುಳಿದವು. ಜನರು ಕಟ್ಟಡಗಳ ಅವಶೇಷಗಳ ಅಡಿಯಲ್ಲಿ ಬಂದಿಯಾಗಿ ಸತ್ತರು. ಇದೆಲ್ಲಾ ಅಂಕಿ ಸಂಖ್ಯೆಗಳು ಬುಖಾರೆಸ್ಟ್‌ನಲ್ಲಿ ಕಂಡದ್ದು. ಅದರ ಸುತ್ತ ಆದ ಹಾನಿಯ ಅಂದಾಜೂ ಇಲ್ಲ.

ಇದೆಲ್ಲ ನಡೆಯುವಾಗ, ರೊಮೇನಿಯಾದ ಆಶಾಕಿರಣ, ನಿಕೊಲಾಯ್ ಚೌಸೆಸ್ಕೋ ಅವರು ಆಫ್ರಿಕಾದಲ್ಲಿ ಹೊಳೆಯುತ್ತಿದ್ದರು. ನೈಜೀರಿಯಾದ ಅಧ್ಯಕ್ಷರ ಜೊತೆ ವಿಶ್ವಶಾಂತಿಯ ಬಗ್ಗೆ ಚಿಂತಿಸುತ್ತಿದ್ದರು. ಅಲ್ಲಿಗೆ ತಲುಪಿದ ವರದಿಗಳ ಪ್ರಕಾರ ಬುಖಾರೆಸ್ಟ್‌ನಲ್ಲಿ ಪ್ರಳಯ ಸದೃಶ ದೃಶ್ಯಗಳು. ನಗರವು ಮರಳುಗಾಡಿನ ಮೇಲೆ ಅವಶೇಷಗಳ ಹಾಗೆ ಇತ್ತು. ಚೌಸೆಸ್ಕೋ ತಕ್ಷಣವೇ ವಿಮಾನ ಹತ್ತಿದರು. ಬುಖಾರೆಸ್ಟ್‌ನ ವಿಮಾನ ನಿಲ್ದಾಣವೂ ನಿರ್ನಾಮಗೊಂಡಿದ್ದರಿಂದ, ಹತ್ತಿರದ ಮಿಲಿಟರಿ ವಿಮಾನ ನೆಲೆಯಲ್ಲಿ ಇಳಿದರು. (ನಾಯಕರು ಎಷ್ಟು ಧೈರ್ಯಶಾಲಿಯೆಂದರೆ, ತಮ್ಮ ಸಭೆಯನ್ನು ರದ್ದುಗೊಳಿಸಿ, ನೇರವಾಗಿ ರೊಮೇನಿಯಾಗೆ ಬಂದರು. ಇದನ್ನು ನನಗೆ ಒಬ್ಬ ವಯಸ್ಸಾದ ವ್ಯಕ್ತಿ ರೈಲಿನಲ್ಲಿ ಹೇಳಿದ). ನಮ್ಮ ನಾಯಕರು ಒಂದು ಸಾದಾ ಅಂಗಿ ಧರಿಸಿ, ಗಾಯಗೊಂಡ ನಗರವನ್ನು ವೀಕ್ಷಿಸುತ್ತಾರೆ. ಬೇರೆ ಬೇರೆ ವಿಧವಾದ ಭಯ ಅವರನ್ನು ಆವರಿಸುತ್ತದೆ. ಅವರನ್ನು ಈ ಭೂಮಿಗೆ ಕರೆತಂದ ವಿಧಿ, ಈ ಬಾರಿ ಅವರನ್ನು ಸಾವಿನಿಂದ ಪಾರುಮಾಡಿದೆ. ಆದರೆ ರೊಮೇನಿಯಾದ ನೆಲ ಮತ್ತೆ ಅದುರಿದರೆ ಅವರ ಗತಿ?

ತನ್ನ ಶತ್ರುಗಳನ್ನು ಎದುರಿಸಲು ಚೌಸೆಸ್ಕೋಗೆ ಅವರದೇ ಆದ ರೀತಿಗಳಿವೆ. ಉದಾಹರಣೆಗೆ, ಅವರು ತಾವು ತಿನ್ನುವ ಆಹಾರವನ್ನು ಮೊದಲು ಸೇವಿಸಿ ಪ್ರಮಾಣಿಸಲು ಒಬ್ಬರನ್ನು ನೇಮಿಸಿಕೊಂಡಿದ್ದಾರೆ. ಆಕಸ್ಮಾತ್ ಅವರ ಶತ್ರುಗಳು ನಮ್ಮ ನಾಯಕರಿಗೆ ಕೊಡುವ ಆಹಾರದಲ್ಲಿ ವಿಷ ಬೆರೆಸಿದ್ದರೆ, ಈ ನೇಮಿಸಿಕೊಂಡ ವ್ಯಕ್ತಿ ತಕ್ಷಣ ಸತ್ತರಾಯಿತು. ಅಷ್ಟೇ ಅವರ ಕೆಲಸ. ಅವರು ಧರಿಸುವ ಎಲ್ಲವನ್ನೂ ಬ್ಯಾಕ್ಟೀರಿಯಾ ಮುಕ್ತಗೊಳಿಸಲು ಅದು ಉದ್ದದ ನಿಲುವಂಗಿಯಾಗಲೀ, ಬನಿಯನ್ ಆಗಲೀ ಅವರಿಗೆ ನಿರ್ವಾತದಿಂದ ಶುದ್ಧೀಕರಿಸಿರುವ ಪ್ಯಾಕಿಂಗ್‌ನಲ್ಲಿ ಮಾತ್ರ ಬರುತ್ತದೆ ಮತ್ತು ನಮ್ಮ ನಾಯಕರು ಒಂದು ದಿರಿಸನ್ನು ಒಂದೇ ಬಾರಿ ಧರಿಸುವುದು.

ಆದರೆ ಈ ಭೂಕಂಪವನ್ನು ತಡೆಯುವುದಕ್ಕೆ ಅವರ ಹತ್ತಿರ ಹತ್ಯಾರಗಳಿರಲಿಲ್ಲ. ಅದನ್ನು ಮೊದಲೇ ತಿಳಿಸಲು ಕ್ಯಾಮೆರಾ ಇಡುವುದಕ್ಕಾಗುವುದಿಲ್ಲ ಅಥವಾ ಅದನ್ನು ಕಠಿಣ ಶಿಕ್ಷೆಗೊಳಪಡಿಸುವುದಕ್ಕೂ ಆಗುವುದಿಲ್ಲ. ಇದರಿಂದಲೇ ನಮ್ಮ ನಾಯಕರು, ಜಪಾನೀ ಪರಿಣತರನ್ನು ಕರೆಸಿ, ಬುಖಾರೆಸ್ಟಿನ ಮೂಲೆ ಮೂಲೆಯನ್ನು ಪರೀಕ್ಷಿಸಿ, ಯಾವ ಜಾಗದಲ್ಲಿ ಭೂಕಂಪದ ಭಯ ಕಡಿಮೆ ಇರಬಹುದು ಎಂದು ತಿಳಿಸಿ ಎಂದು ಹೇಳಿದರು. ಅವರು ಎಲ್ಲಾ